**ಸಾಕ್ಷಿಗೆ ದಿಃ 12.02.2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ.ಪಿ ಎಸ್ ಎಲ್ ರವರಿಂದಃ</u>**

ಮುದ್ದು ಪೂಜಾರಿ (1 ನೇ ಪ್ರತಿವಾದಿ) ನನ್ನ ಗಂಡ. ನನ್ನ ವಿವಾಹ 1979 ರಲ್ಲಿ ಆಗಿದೆ. ವಿವಾಹವಾಗುವಾಗ ನನ್ನ ಗಂಡ ಮುಂಬೈನ ಸಕಿನಕಾದಲ್ಲಿ ಬಸ್ ಏಜೆಂಟ್ ಆಗಿದ್ದರು ಎಂದರೆ ಸರಿ. ನಾವು ಮದುವೆಯ ನಂತರ ಒಂದು ವರ್ಷ ಮುಂಬೈಯ ಸಕಿನಕಾದಲ್ಲಿ ವಾಸವಿದ್ದೆವು. ನನ್ನ ಗಂಡ ನನಗೆ ಹೇಳಿದ ಪ್ರಕಾರ ಅವರ 12 ನೇ ವಯಸ್ಸಿ ಗೆ ಅವರು ಮುಂಬೈಗೆ ಹೋಗಿ ನೆಲೆಸಿದ್ದರು. ಮದುವೆಯಾಗಿ ಮೂರು ವರ್ಷದ ನಂತರ ಮುಂಬೈ ಬಿಟ್ಟು ನಾನು ಮತ್ತು ಅವರು ಮೂಡಬಿದ್ರೆಗೆ ಬಂದು ನೆಲೆಸಿದ್ದೇವೆ. ಆನಂತರ ಅವರು ಮುಂಬೈಗೆ ಹೋಗಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಮುಂದುವರೆದು, ಅವರ ಪಾಲುದಾರರಲ್ಲಿ ಅವರ ಕೆಲಸ ಮಾಡಿಸಿಕೊಳ್ಳುತಿದ್ದರು ಎಂದು ಹೇಳುತ್ತಾರೆ. ಅವರು southern travels ಕೆಲಸ ಮಾಡಿಕೊಂಡಿದ್ದರು. ಅದರಲ್ಲಿ ಪಾಲುದಾರರಾಗಿದ್ದರು. ಅವರ ಪಾಲುದಾರರ ಹೆಸರು ಸಂಜೀವ ಶೆಟ್ಟಿ ಎಂದು ಆಗಿರುತ್ತದೆ. ನನ್ನ ಗಂಡ ಎಷ್ಟು ವರ್ಷ ಈ ರೀತಿ ಪಾಲುದಾರಿಗೆ ನಡೆಸಿಕೊಂಡು ಬಂದಿದ್ದಾರೆ ಎಂದು ನನಗೆ ಸರಿಯಾಗಿ ಹೇಳಲಾಗುವುದಿಲ್ಲ. ನನ್ನ ಗಂಡನ ಬಳಿ ಕಂಬಳದ ಕೋಣಗಳು ಇದ್ದವು. ನನ್ನ ಗಂಡ ಊರಿಗೆ ಬಂದಾಗ ಎಲ್ಲಾ ಕಂಬಳ ಕ್ರೀಡೆಯಲ್ಲಿ ಕೋಣಗಳನ್ನು ತೊಡಗಿಸಿಕೊಳ್ಳುತಿದ್ದರು. ಅವರು ಕಂಬಳ ಕೋಣದ ಯಜಮಾನಿಗೆ ಮಾಡುತಿದ್ದರು. ಶ್ರೀಧರ ಭಂಡಾರಿ, ಶೇಖರ ಪೂಜಾರಿ ಮತ್ತು ಜಗನ್ನಾಥ ಶೆಟ್ಟಿಯವರು ನನ್ನ ಗಂಡನಿಗೆ ಕಂಬಳದಲ್ಲಿ ಸಹಕರಿಸುತಿದ್ದರು. ನನ್ನ ಗಂಡ ಅವರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಅವರುಗಳು ನನ್ನ ಗಂಡ ಹೇಳಿದ ಕೆಲಸವನ್ನು ಚಾಚುತಪ್ಪದೇ ಮಾಡುತಿದ್ದರಾ ಇಲ್ಲವಾ ಎಂದು ನನಗೆ ಗೊತ್ತಿಲ್ಲ.

ನನ್ನ ಮತ್ತು ನನ್ನ ಗಂಡನ ವಿವಾಹದೊಂದಿಗೆ ಶೀನ ಪೂಜಾರಿ ಮತ್ತು ದೇವಕಿ (7 ನೇ ಪ್ರತಿವಾದಿ) ರವರ ವಿವಾಹ ಒಂದೇ ಮಂಟಪದಲ್ಲಿ ಆಗಿತ್ತು. ಶೀನ ಪೂಜಾರಿ ನನ್ನ ಗಂಡನ ಜೊತೆಗೆ

ಮುಂಬೈಯಲ್ಲಿ ಇರಲಿಲ್ಲ. ರಾಮ ಪೂಜಾರಿ (2 ನೇ ಪ್ರತಿವಾದಿ) ಮತ್ತು ಸುಂದರ (3 ನೇ ಪ್ರತಿವಾದಿ) ರವರು ಸಹ ಒಂದೇ ಮಂಟಪದಲ್ಲಿ ಜೋಡಿ ಮದುವೆಯಾದವರು ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸದರಿ ವಿವಾಹವು ಯಾವ ಇಸವಿಯಲ್ಲಿ ಆಗಿದೆ ಎಂದು ನನಗೆ ನೆನಪಿಲ್ಲ. ಅವರ ವಿವಾಹವು ನನ್ನ ವಿವಾಹವಾಗಿ 10 ವರ್ಷದ ನಂತರ ಆಗಿರಬಹುದು. ಆ ಸಮಯ ನನ್ನ ಅತ್ತೆ ಮಾವ ಜೀವಂತ ಇದ್ದರು ಎಂದರೆ ಸರಿ. ಸಾಕ್ಷಿಗೆ ಒಂದು ಫೊಟೋ ತೋರಿಸಿ ಇದು ಸುಂದರ ರವರ ವಿವಾಹದ ಫೊಟೋ ಎಂದರೆ ಸಾಕ್ಷಿ ಒಪ್ಪುತ್ತಾರೆ. ಅದರಲ್ಲಿ ನನ್ನ ಅತ್ತೆ ಮತ್ತು ಮಾವ ಕಾಣುತ್ತಾರೆ ಎಂದರೆ ಸಾಕ್ಷಿ ಒಪ್ಪುತ್ತಾರೆ. ನನ್ನ ಅತ್ತೆಯನ್ನು ಹಿಡಿದು ನಿಲ್ಲಿಸಿದ ವ್ಯಕ್ತಿ ಶೇಖರ್ ಆಗಿರುತ್ತಾರೆ. ಅವರು ಕಂಬಳದ ಕೋಣ ಇರುವಾಗ ನಮ್ಮ ಮನೆಗೆ ಕೆಲಸಕ್ಕೆ ಬರುತಿದ್ದರು. ಫೊಟೋವನ್ನು ನಿಪಿ1 ಎಂದು ಗುರುತಿಸಲಾಯಿತು. ಶೇಖರ ಪೂಜಾರಿಯವರು ನನ್ನ ವಿವಾಹವಾಗುವ ಎಷ್ಟು ವರ್ಷದ ಪೂರ್ವದಿಂದ ನಿಮ್ಮ ಮನೆಯಲ್ಲಿ ಕೆಲಸಕ್ಕೆ ಇದ್ದರು ಎಂದಾಗ ಸಾಕ್ಷಿ ಖಾಯಂ ಕೆಲಸಕ್ಕೆ ಇರಲಿಲ್ಲ ಆದರೆ ಕೆಲಸಕ್ಕೆ ಬರುತಿದ್ದರು ಎಂದು ಸಾಕ್ಷಿ ಹೇಳುತ್ತಾರೆ.

ಫೊಟೋದಲ್ಲಿ – ನಿಪಿ1 ರಲ್ಲಿ ನನ್ನ ಅತ್ತೆಯನ್ನು ಅವರಿಗೆ ನಿಲ್ಲಲು ಆಗದ ಕಾರಣಕ್ಕೆ ಶೇಖರ್ ರವರು ಹಿಡಿದುಕೊಂಡಿದ್ದಾರೆ ಎಂದರೆ ಸಾಕ್ಷಿ ಒಪ್ಪುತ್ತಾರೆ. ನನ್ನ ಅತ್ತೆ ನಿಲ್ಲದೇ ಇರಲು ಅವರಿಗೆ ಪಾರ್ಶುವಾಯು ಆಗಿತ್ತಾ ಎಂದರೆ ಸಾಕ್ಷಿ ಇಲ್ಲ, ಅವರು ಆರೋಗ್ಯವಾಗಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಅವರು ಸಾಯುವವರೆಗೂ ಓಡಾಡಿಕೊಂಡಿದ್ದರು. ಮೂಡಬಿದ್ರೆಯ ಸಬ್ ರಿಜಿಸ್ಟರ್ ಕಚೇರಿಗೂ ನಮ್ಮ ಮನೆಗೂ 1.5 ಕಿಲೋ ಮೀಟರ್ ದೂರ ಇದೆ. ನನ್ನ ಗಂಡ ದಾವೆಯಲ್ಲಿ ಸಲ್ಲಿಸಿದ ಪ್ರತಿವಾದ ಪತ್ರದ ಬಗ್ಗೆ ನನಗೆ ಅನುಭವ ಇಲ್ಲ. ದಾವಾ ಆಸ್ತಿ ಹೇಗೆ ನಮಗೆ ಬಂತು ಎಂದು ನನಗೆ ಅನುಭವ ಇಲ್ಲ. ನನ್ನ ಮಾವ 2012 ರಲ್ಲಿ ಮೃತಪಟ್ಟಿರಬಹುದು ಎಂದು ಅಂದಾಜಿಸುತ್ತೇನೆ. ವಿಶ್ವನಾಥ (4 ನೇ ಪ್ರತಿವಾದಿ) ಯಾವಾಗ ಮೃತಪಟ್ಟರು ಎಂದು ನನಗೆ ನೆನಪಿಲ್ಲ. ದಾವೆ ದಾಖಲಿಸಿದ ನಂತರ ಮೃತಪಟ್ಟಿರಬಹುದು ಎಂದು ಸಾಕ್ಷಿ ಹೇಳುತ್ತಾರೆ. ಅವರೂ ಕೂಡ ದಾವಾ

ಆಸ್ತಿಯಲ್ಲಿಯೇ ವಾಸವಿದ್ದರು ಎಂದರೆ ಸರಿ. ವಾದಿ ಕೂಡ ದಾವಾ ಆಸ್ತಿಯಲ್ಲಿ ಇರುವಾಗಲೇ ಅವರ ವಿವಾಹವಾಯಿತು. ಯಾವ ಇಸವಿಯಲ್ಲಿ ಎಂದು ನನಗೆ ನೆನಪಿಲ್ಲ. ಪದ್ಮಾವತಿ ಮತ್ತು ಶಾಂಭವಿ (5 ಮತ್ತು 6 ನೇ ಪ್ರತಿವಾದಿಗಳು) ರವರ ವಿವಾಹ ಎಷ್ಟನೇ ಇಸವಿಯಲ್ಲಿ ಆಯಿತು ಎಂದು ನನಗೆ ನೆನಪಿಲ್ಲ. ಎಲ್ಲಾ ಮಕ್ಕಳ ವಿವಾಹವಾಗುವವರೆಗೂ ಪೂವಪ್ಪ ಪೂಜಾರಿ ಮತ್ತು ಅವರ ಹೆಂಡತಿ ಜೀವಂತ ಇದ್ದರಾ ಎಂದರೆ ಸಾಕ್ಷಿ ಸಣ್ಣ ಮಗಳು ಶಾಂಭವಿಯ ವಿವಾಹವಾಗುವ ಮೊದಲು ತೀರಿಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

ನ್ಯಾಯಾಲಯದ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು & ಜೆ.ಎಂ.ಎಫ್.ಸಿ.,
ಮೂಡಬಿದ್ರೆ